# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ. ಸಿ. ನಂ.386/2020

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಮೊಯಿಸ್ @ ಮೊಯಿಸೊದ್ದಿನ | ಸಿಡಬ್ಲ್ಯೂ-05 | ಪಿಡಬ್ಲ್ಯೂ-02 |
| ತಂದೆಯ/ಗಂಡನ ಹೆಸರು | ಖಾಜಾನಿಜಾಮುದ್ದಿನ ಷಾ | | |
| ವಯಸ್ಸು | 35 ವರ್ಷ | | |
| ಉದ್ಯೋಗ | ಮೆಕ್ಯಾನಿಕ್ ಕೆಲಸ | | |
| ವಾಸ ಸ್ಥಳ | ಸೇಡಂ | | |

ದಿನಾಂಕ 13-12-2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಆರೋಪಿಯ ಪರಿಚಯ ನನಗೆ ಇರುತ್ತದೆ. ಚಾಸಾ-1 ಇವರ ಪರಿಚಯ ಇರುತ್ತದೆ. ಈಗ 3 ವರ್ಷಗಳ ಹಿಂದೆ ನಾನು ನಮ್ಮ ಮನೆಯಲ್ಲಿ ಮುಂಜಾನೆ 11.30 ಗಂಟೆಗೆ ಇದ್ದಾಗ ಆರೋಪಿಗೂ ಚಾಸಾ-1 ಇವರಿಗೂ ಜಗಳ ಆಗಿತ್ತು. ನಾನು ಚಾಸಾ-1 ಇವರ ಮನೆಯ ಕೆಳಮನೆಯಲ್ಲಿ ವಾಸವಿದ್ದು ಮೇಲೆ ಹೋಗಿ ನೋಡಲಾಗಿ ಆರೋಪಿ ಚಾಸಾ-1 ಇವರಿಗೆ ಹೊಡೆಯುತ್ತಿದ್ದರು. ಆರೋಪಿ ಕೈಯಿಂದ ಮತ್ತು ಕಲ್ಲಿನಿಂದ ಚಾಸಾ-1 ಇವರಿಗೆ ಹೊಡೆದಿರುತ್ತಾನೆ. ಆಗ ನಾನು ಜಗಳ ಬಿಡಿಸಿರುತ್ತೇನೆ. ಚಾಸಾ-1 ಇವರಿಗೆ ಕಣ್ಣಿನ ಹತ್ತಿರ ಪೆಟ್ಟು ಆಗಿತ್ತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಕಲ್ಲನ್ನು ಗುರುತಿಸುತ್ತಾರೆ ಮತ್ತು ಇದರಿಂದಲೇ ಆರೋಪಿ ಚಾಸಾ-1 ಇವರಿಗೆ ಹಲ್ಲೆ ಮಾಡಿರುವುದಾಗಿ ನುಡಿಯುತ್ತಾರೆ. ಕಲ್ಲನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ. ಜಗಳದ ಕಾರಣ ಏನು ಗೊತ್ತಿಲ್ಲ. ಘಟನೆಯ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಘಟನೆ ದಿನಾಂಕ 23.04.2020 ರಂದು ಆಗಿರುತ್ತದೆ ಎಂದರೆ ಸರಿ. ಚಾಸಾ-1 ಇವರು ಬಜಾರ ಕಡೆಗೆ ಹೋಗುತ್ತಿರುವಾಗ ಆರೋಪಿ ಎದುರುಗಡೆಯಿಂದ ಆತನನ್ನು ತಡೆದು ನಿಲ್ಲಿಸಿ ಫಕೀರ ಮಾಕೇ ಲೌಡೆ ತೇರಿ ಗಾಂಡ ಬರಿ ಅಬ್ದುಲ ರಹೀಮ ಕಾ ಗರ್ ಬನಾನೇ ದೇ ನೈಹಿ ತೋ ತುಜಕೆ ಜಾನಸೇ ಮಾರತಾ ಹು ಅಂತಾ ಅಂದಿರುತ್ತಾನೆ ಎಂದರೆ ಸರಿ. ಅದೇ ರೀತಿ ಆರೋಪಿ ನಿನ್ನನ್ನು ಜೀವ

ಸಹಿತ ಬಿಡುವುದಿಲ್ಲ ಅಂತಾ ಅಂದಿರುತ್ತಾನೆ ಎಂದರೆ ಸರಿ. ಜಗಳವನ್ನು ನಾನು ಮತ್ತು ನೂರಶಾ ಚಿನ್ನಾಷಾ ಬಿಡಿಸಿರುತ್ತೇವೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎಸ್. ಆರ್. ಪಿ. ಆರೋಪಿ ಪರ ವಕೀಲರಿಂದ**

2020 ರಲ್ಲಿ ಕರೋನಾ ಇತ್ತು ಎಂದರೆ ಸರಿ. ಎಲ್ಲ ಜನರು ಮನೆಯಲ್ಲಿಯೇ ಇರುತ್ತಿದ್ದರು ಎಂದರೆ ಸರಿ. ನನ್ನ ಮನೆ ಚೊಟಿ ಮಸೀದ ಕಡೆ ಇರುತ್ತದೆ ಎಂದರೆ ಸರಿ. ಬಡಿ ಮಸೀದ ಬೇರೆ ಕಡೆ ಮೇಲೆ ಇರುತ್ತದೆ ಎಂದರೆ ಸರಿ. ಚೋಟಿ ಮಸೀದಿಯಿಂದ ಬಡಿ ಮಸೀದ 100 ಮೀ. ಅಂತರದಲ್ಲಿ ಇರುತ್ತದೆ ಎಂದರೆ ಸರಿ. ಬಡೆ ಮಸೀದಿಗೆ ಹೋಗಲು ಮೆಟ್ಟಲುಗಳು ಇರುತ್ತವೆ ಎಂದರೆ ಸರಿ. ಮೇಲೆ ಇರುವವರಿಗೆ ಕೆಳಗೆ ಏನು ಆಗುತ್ತದೆ ಎಂದು ಕೇಳಿಸುವುದಿಲ್ಲ ಎಂದರೆ ಸರಿ. ಜಗಳ ಆಗಿದೆ ಎಂದು ಹೇಳಿದ್ದು ಆಗ ನಾನು ನನ್ನ ಮನೆಯ ಹತ್ತಿರ ಇದ್ದೆ. ಚಾಸಾ–1 ನಮ್ಮ ಸಂಬಂಧಿಕರಾಗಬೇಕು ಎಂದರೆ ಸರಿ. ಎರಡು ಮಸೀದಿಗಳ ಅಕ್ಕ–ಪಕ್ಕ ಹಿಂದೂಗಳ ಮನೆಗಳು ಸಹ ಇರುತ್ತವೆ ಎಂದರೆ ಸರಿ. ಆ ದಿವಸ ತಂಟೆ ಆಗಿರುವುದಾಗಿ ಮತ್ತು ತಂಟೆಯನ್ನು ನಾನು ಬಿಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1 ರವರು ನನ್ನ ಸಂಬಂಧಿಕರು ಆಗುವುದರಿಂದ ಅವರಿಗೆ ಅನುಕೂಲಮಾಡಿಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಚಾಸಾ–1 ಇವರಿಗೆ ಮು.ಮಾ.1 ರಿಂದ ಹೊಡೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಸಾಕಷ್ಟು ದೊರೆಯುತ್ತವೆ ಎಂದರೆ ಸರಿ. ಅವರಿಗೆ ಫಕೀರ ಮಾ ಕೇ ಲೌಡೆ ಅಂತಾ ಆರೋಪಿ ಬೈದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ದಮಕಿ ಹಾಕಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಜಗಳದ ಸಪ್ಪಳ ಕೇಳಿಸಿಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH